# ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್

**ವಿಷಯ:** ಪ್ರಾತ್ಯಕ್ಷಿಕ ಮೌಲ್ಯಮಾಪನ(Acturial Valuation)ಆಧಾರದ ಮೇಲೆ ಕವಿಪ್ರನಿನಿ ಮತ್ತು ವಿಸಕಂಗಳು ಎನ್‌ಡಿಸಿಪಿಎಸ್ ವ್ಯಾಪ್ತಿಗೆ ಒಳಪಡುವ ನೌಕರರ ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆಯನ್ನು ಪಾವತಿಸುವ ಕುರಿತು.

**ಓದಲಾಗಿದೆ:**

| | |
|---|---|
| 1 | ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06, ದಿನಾಂಕ:05.07.2007 |
| 2 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2018-19, ದಿನಾಂಕ: 19.07.2019 |
| 3 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2020-21, ದಿನಾಂಕ: 25.11.2020 |
| 4 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2020-21, ದಿನಾಂಕ: 25.11.2020 |
| 5 | M/s Armstrong International Consultants, Coimbatoreರವರ 2018, 2019, 2020 & 2021ನೇ ಸಾಲಿನ ಉಪದಾನ ವರದಿಗಳ ದಿನಾಂಕ:17.03.2022 |
| 6 | ಟ್ರಸ್ಟ್‌ನ ಆದೇಶ ಸಂಖ್ಯೆ: ಎನ್‌ಡಿಸಿಪಿಎಸ್‌ಎಫ್ ಪಿಜಿಟಿ/ಎಫ್6/2022-23/ಸಿವೈಎಸ್-03 ದಿನಾಂಕ: 30.05.2022 |
| 7 | M/s Armstrong International Consultants, Coimbatoreರವರ 2018, 2019, 2020 & 2021ನೇ ಸಾಲಿನ ಕುಟುಂಬ ಪಿಂಚಣಿ ವರದಿಗಳ ದಿನಾಂಕ:02.08.2022 |
| 8 | ಟ್ರಸ್ಟ್‌ನ ಆದೇಶ ಸಂಖ್ಯೆ: ಎನ್‌ಡಿಸಿಪಿಎಸ್‌ಎಫ್ ಪಿಜಿಟಿ/ಎಫ್6/2022-23/ಸಿವೈಎಸ್-04 ದಿನಾಂಕ: 12.08.2022. |
| 9 | M/s Armstrong International Consultants, Coimbatoreರವರ ದಿನಾಂಕ: 31.03.2022ವರದಿಗಳ ದಿನಾಂಕ:08.08.2022 |

**ಪ್ರಸ್ತಾವನೆ:**

1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018, ದಿನಾಂಕ:23.06.2018ನ್ನು ನಿಗಮದಲ್ಲಿ ಅಳವಡಿಸಿಕೊಳ್ಳುವ ದೃಷ್ಟಿಯಿಂದ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ನೌಕರರು ಮತ್ತು ನೌಕರರ ಅವಲಂಬಿತರಿಗೆ ದಿನಾಂಕ:01.04.2018 ರಿಂದ ಜಾರಿಗೆ ಬರುವಂತೆ ನಿವೃತ್ತಿ/ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ.

2. ದಿನಾಂಕ:01.04.2006ರಂದು ಅಥವಾ ನಂತರ ಸೇವೆಗೆ ಸೇರಿರುವ/ಸೇರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಸೇವೆ ಸಲ್ಲಿಸಿದ ಎಲ್ಲಾ ಅಧಿಕಾರಿ/ನೌಕರರಿಗೆ ನಿವೃತ್ತಿ ಉಪದಾನ ಸೌಲಭ್ಯವನ್ನು ಹಾಗೂ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೌಕರರ ಅವಲಂಬಿತ ಕುಟುಂಬಕ್ಕೆ ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿಯನ್ನು ಕೆಲವು ಷರತ್ತಿಗೊಳಪಟ್ಟು ಮೇಲೆ(3)ರಲ್ಲಿ ಓದಲಾದ ನಿಗಮದ ಆದೇಶದನುಸಾರ ದಿನಾಂಕ:01.04.2018ರಿಂದ ಜಾರಿಗೆ ಬರುವಂತೆ ವಿಸ್ತರಿಸಲಾಗಿರುವುದನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.

3. ಎನ್‌ಡಿಸಿಪಿಎಸ್ ನೌಕರರ ಕುಟುಂಬ ಪಿಂಚಣಿ ಮತ್ತು ಉಪದಾನದ ಹೊಣೆಯನ್ನು(Liability) ಕಂಡುಹಿಡಿಯಲು ಪ್ರಾತ್ಯಕ್ಷಿಕ ಮೌಲ್ಯಮಾಪನ(Actuarial Valuation) ಮಾಡಿಸಿ, ಅನುಸರಿಸಬೇಕಾದ ಕ್ರಮಗಳನ್ನು ಮೇಲೆ (4)ರಲ್ಲಿ ಓದಲಾದ ನಿಗಮದ ಆದೇಶದಲ್ಲಿ ಈ ಕೆಳಗಿನಂತೆ ಅನುಮೋದಿಸಿದೆ.

   ಅ) ನಿಗಮ ಮತ್ತು ಎಸ್ಕಾಂಗಳಿಂದ ನಿಗದಿತ ದಿನಾಂಕದಲ್ಲಿರುವಂತೆ ಮೂಲಧನ ನಿಧಿ (Corpus Fund)ಗಾಗಿ ಬೇಕಾದ ಮೊತ್ತ ಒಂದೇ ಗಂಟಿನಲ್ಲಿ/ಮುಂಗಡವಾಗಿ ಸ್ವೀಕರಿಸುವುದು.

   ಆ) ನಿಗಮ ಮತ್ತು ಎಸ್ಕಾಂಗಳಿಂದ ಸ್ವೀಕೃತವಾಗುವ ಕುಟುಂಬ ಪಿಂಚಣಿ ಮತ್ತು ಉಪದಾನದ ವಾರ್ಷಿಕ ವಂತಿಗೆ ದರವನ್ನು ನಿಗದಿಗೊಳಿಸುವುದು.

   ಇ) ನಿಗಮ ಮತ್ತು ಎಸ್ಕಾಂಗಳಿಂದ ನಿಗದಿತ ದಿನಾಂಕದಂದು ಪ್ರತಿ ಮಾಹೆಯ ವಂತಿಗೆ ಮೊತ್ತವನ್ನು ಸ್ವೀಕರಿಸುವುದು.

   ಈ) ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಪಾವತಿಗೆ ಸಂಬಂಧಿಸಿದಂತೆ, "Pay-as-you-go" ವಿಧಾನವನ್ನು ಅಳವಡಿಸಿಕೊಳ್ಳುವುದು.

4. ಮೇಲೆ 5 ಮತ್ತು 7 ರಲ್ಲಿ ಓದಲಾದ ಪ್ರಾತ್ಯಕ್ಷಿಕ ಮೌಲ್ಯಮಪನ ವರದಿಗಳನುಸಾರ ಮೇಲೆ 6 ಮತ್ತು 8 ರಲ್ಲಿ ಓದಲಾದ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಆದೇಶಗಳಲ್ಲಿ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳನ್ನು ನಿಗದಿಪಡಿಸಲಾಗಿರುತ್ತದೆ.

5. M/s Armstrong International Consultants, Coimbatore ರವರು ದಿನಾಂಕ:08.08.2022ರ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಯಲ್ಲಿ ದಿನಾಂಕ:31.03.2022ರ ಅಂತ್ಯಕ್ಕೆ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನಗಳ ಪ್ರಾತ್ಯಕ್ಷಿಕ ಮೌಲ್ಯಮಾಪನ ಲೆಕ್ಕ ಫಲಿತಾಂಶವನ್ನು ಪ್ರಸ್ತುತ ಪಡಿಸಿರುತ್ತಾರೆ ಹಾಗೂ ಮೌಲ್ಯ ಮಾಪನಕ್ಕೆ ಸಂಬಂಧಿಸಿರುವ ವರ್ಷದಿಂದಲೇ ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆಯನ್ನು ಆಕರಿಸುವಂತೆ ಸೂಚಿಸಿರುತ್ತಾರೆ. ಆರ್ಥಿಕ ವರ್ಷದ ಮಾರ್ಚ್ ಅಂತ್ಯಕ್ಕೆ (ಉದಾಹರಣೆಗೆ: 31.03.2022ರ ಅಂತ್ಯಕ್ಕೆ) ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಮಾಹಿತಿಗಳನ್ನು ಪ್ರಾತ್ಯಕ್ಷಿಕ ಮೌಲ್ಯಮಾಪಕರಿಗೆ ಒದಗಿಸಿದರೂ ಸಹ ಸಾಮಾನ್ಯವಾಗಿ ವರದಿಯಲ್ಲಿ ಶಿಫಾರಸ್ಸು ಮಾಡಲಾದ ವಂತಿಗೆ ದರಗಳನ್ನು ಅದೇ ಆರ್ಥಿಕ ವರ್ಷದ ಆರಂಭದಿಂದಲೇ (ಉದಾಹರಣೆಗೆ 01.04.2021ರಿಂದ) ಅನುಷ್ಠಾನಗೊಳಿಸುವ ಕ್ರಮವನ್ನು ಅನುಸರಿಸಲಾಗಿರುತ್ತದೆ.

6. ದಿನಾಂಕ:31.03.2022ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪಕರು ಕವಿಪ್ರನಿನಿ/ವಿಸಕಂಗಳಿಗೆ ಸಂಬಂಧಿಸಿದ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಪ್ರಾತ್ಯಕ್ಷಿಕ ವರದಿಯ ಕರಡು ಪ್ರತಿಯನ್ನು ದಿನಾಂಕ:10.08.2022ರಂದು ಎಲ್ಲಾ ಕಂಪನಿಗಳ ಆರ್ಥಿಕ ಸಲಹೆಗಾರರಿಗೆ/ಮುಖ್ಯ ಆರ್ಥಿಕ ಅಧಿಕಾರಿಗಳಿಗೆ ಈ ಕಛೇರಿಯಿಂದ ಕಳುಹಿಸಲು ವ್ಯವಸ್ಥೆ ಮಾಡಲಾಗಿರುತ್ತದೆ. ಸದರಿ ಪತ್ರದಲ್ಲಿ ವರದಿಯಲ್ಲಿನ ಯಾವುದೇ ಅಂಶಗಳ(Assumptions) ಆತಂಕಗಳು (Apprehension) ಮತ್ತು ಇತರೆ ವಿಷಯಗಳ ಬಗ್ಗೆ ನೀಡಿರುವ ಸ್ಪಷ್ಟೀಕರಣಗಳನ್ನು ಅಭ್ಯಸಿಸಿ, ಹೆಚ್ಚಿನ ಮಾಹಿತಿ ಹಾಗೂ ಸ್ಪಷ್ಟೀಕರಣ ಬೇಕಿದ್ದಲ್ಲಿ 10 ದಿನಗಳೊಳಗೆ ವಿಷಯವನ್ನು ನಿರ್ದಿಷ್ಟವಾಗಿ ವಿಶದೀಕರಿಸಿ ಈ ಕಛೇರಿಗೆ ತಿಳಿಸಲು ಕೋರಲಾಗಿರುತ್ತದೆ ಹಾಗೂ ವರದಿಯಲ್ಲಿನ ಅಂಶಗಳ ಕುರಿತು ಅಗತ್ಯವಿರುವ ಸ್ಪಷ್ಟೀಕರಣವನ್ನು ಪ್ರಾತ್ಯಕ್ಷಿಕ ಮೌಲ್ಯಮಾಪಕರಿಂದ ಪಡೆದು, ಕಳುಹಿಸುವುದರ ಜೊತೆಗೆ ವರದಿಗಳಲ್ಲಿನ ಅಂಶಗಳನ್ನು ಅನುಷ್ಠಾನಕ್ಕೆ ತಂದು ಮುಂದಿನ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿರುತ್ತದೆ. ಈ ಕುರಿತು ಕವಿಪ್ರನಿನಿ ಮತ್ತು ವಿಸಕಂಗಳಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿರುವುದಿಲ್ಲ.

7. ಪ್ರಾತ್ಯಕ್ಷಿಕ ವರದಿಗಳನ್ನು ಈಗಾಗಲೇ ಎಲ್ಲಾ ಆರ್ಥಿಕ ಸಲಹೆಗಾರರಿಗೆ ಕಳುಹಿಸಲಾಗಿರುವುದರಿಂದ ಹಾಗೂ ಈ ಸಂಬಂಧ ಕಂಪನಿಗಳಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿರುವುದಿಲ್ಲವಾದ್ದರಿಂದ, ದಿನಾಂಕ:01.04.2021 ರಿಂದ ಅನ್ವಯವಾಗುವಂತೆ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳನ್ನು ನಿಗದಿಪಡಿಸಿ, ಟ್ರಸ್ಟ್‌ನಿಂದ ಆದೇಶ ಹೊರಡಿಸುವುದು ಸೂಕ್ತವೆಂದು ಹಾಗೂ ಮುಂದಿನ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯಲ್ಲಿ ಟ್ರಸ್ಟ್ ಕೈಗೊಂಡ ಈ ಕ್ರಮವನ್ನು ಅನುಸಮರ್ಥಿಸುವಂತೆ ಕೋರಬಹುದಾಗಿರುತ್ತದೆ ಎಂಬ ಪ್ರಸ್ತಾವನೆಯನ್ನು ಎನ್‌ಡಿಸಿಪಿಎಸ್ ಉಭಯ ಟ್ರಸ್ಟ್‌ಗಳ ಅಧ್ಯಕ್ಷರು ಹಾಗೂ ನಿರ್ದೇಶಕರು (ಆ & ಮಾಸಂ) ರವರು ಈ ಕಛೇರಿ ಟಿಪ್ಪಣಿ ದಿನಾಂಕ:28.03.2023ರಲ್ಲಿ ಅನುಮೋದಿಸಿರುತ್ತಾರೆ.

8. ಮೇಲಿನ ಕಂಡಿಕೆ-7ರ ಹಿನ್ನೆಲೆಯಲ್ಲಿ, ದಿನಾಂಕ:25.11.2020ರ ನಿಗಮದ ಆದೇಶದನುಸಾರ ಎಲ್ಲಾ ಕಂಪನಿಯ ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆಯ ದರಗಳನ್ನು ಸೂಚಿಸಿ ಈ ಆದೇಶ.

**ಆದೇಶ ಸಂಖ್ಯೆ:ಎನ್‌ಡಿಸಿಪಿಎಸ್‌ಎಫ್‌ಪಿಜಿಟಿ/ಎಫ್6/2022-23/ಸಿವೈಎಸ್- 05**

**ಬೆಂಗಳೂರು,ದಿನಾಂಕ: 30 MAR 2023**

ಮೇಲೆ ವಿವರಿಸಿದ ಸಂದರ್ಭಗಳ ಹಿನ್ನೆಲೆಯಲ್ಲಿ, ದಿನಾಂಕ:01.04.2006 ಮತ್ತು ತದನಂತರ ನೇಮಕಗೊಂಡ ಎನ್‌ಡಿಸಿಪಿಎಸ್ ಯೋಜನೆಯ ವ್ಯಾಪ್ತಿಗೆ ಒಳಪಡುವ ಸಿಬ್ಬಂದಿಗಳಿಗೆ ಸಂಬಂಧಪಟ್ಟಂತೆ, ಕವಿಪ್ರನಿನಿ ಮತ್ತು ವಿಸಕಂಗಳು ಪಾವತಿಸಬೇಕಾದ, ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆಯ ದರಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ.

| ಕುಟುಂಬ ಪಿಂಚಣಿ ವಂತಿಗೆ ದರ (ಮೂಲ ವೇತನ + ಡಿಯರ್‌ನೆಸ್ ಪೇ + ತುಟ್ಟಿ ಭತ್ಯೆ ) | | | |
|---|---|---|---|
| ರಿಂದ | ವರೆಗೆ | ದಿನಾಂಕ:13.02.2015ಕ್ಕೂ ಹಿಂದೆ ನೇಮಕಗೊಂಡಿರುವ ಎನ್‌ಡಿಸಿಪಿಎಸ್ ನೌಕರರಿಗೆ ಸಂಬಂಧಿಸಿದ ವಂತಿಗೆ ದರದ ವಿವರಗಳು (uniform rates) | ದಿನಾಂಕ: 13.02.2015ರ ನಂತರ ನೇಮಕಗೊಂಡಿರುವ ಎನ್‌ಡಿಸಿಪಿಎಸ್ ನೌಕರರಿಗೆ ಸಂಬಂಧಿಸಿದ ವಂತಿಗೆ ದರದ ವಿವರಗಳು |
| 1.04.2021 ರಿಂದ 31.03.2022 ಹಾಗೂ ಮುಂದಕ್ಕೆ | | 0.52% | |
| • **ಮೌಲ್ಯಮಾಪಕರ ವರದಿಗಳಲ್ಲಿ (ಪುಟಸಂಖ್ಯೆ-11) ಕಂಪನಿವಾರು ಕುಟುಂಬ ಪಿಂಚಣಿ ವಂತಿಗೆ ದರಗಳಲ್ಲಿ ಅತ್ಯಂತ ಕಡಿಮೆ (Below1%) ವ್ಯತ್ಯಾಸ ಬಂದಿರುವುದರಿಂದ, ಎಲ್ಲಾ ಕಂಪನಿಗಳಿಗೆ ಒಂದೇ(Uniform) ದರಗಳನ್ನು ನಿಗದಿಪಡಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.** | | | |

| ಉಪದಾನ ವಂತಿಗೆ ದರ (ಮೂಲ ವೇತನ + ಡಿಯರ್‌ನೆಸ್ ಪೇ) | | | | |
|---|---|---|---|---|
| ರಿಂದ | ವರೆಗೆ | ಕಂಪನಿ | ದಿನಾಂಕ:13.02.2015ರವರೆಗೆ ನೇಮಕಗೊಂಡಿರುವ ಎನ್‌ಡಿಸಿಪಿಎಸ್ ನೌಕರರಿಗೆ ಸಂಬಂಧಿಸಿದ ವಂತಿಗೆ ದರದ ವಿವರಗಳು(uniform rates) | ದಿನಾಂಕ: 13.02.2015ರ ನಂತರ ನೇಮಕಗೊಂಡಿರುವ ಎನ್‌ಡಿಸಿಪಿಎಸ್ ನೌಕರರಿಗೆ ಸಂಬಂಧಿಸಿದ ವಂತಿಗೆ ದರದ ವಿವರಗಳು |
| 01.04.2021 ರಿಂದ 31.03.2022 ಹಾಗೂ ಮುಂದಕ್ಕೆ | | ಬೆವಿಕಂ | 2.74% | 2.18% |
| | | ಚಾವಿಸನಿ | | 2.12% |
| | | ಗುವಿಕಂ | | 2.09% |
| | | ಹುವಿಕಂ | | 2.14% |
| | | ಕವಿಪ್ರನಿನಿ | | 2.01% |
| | | ಮವಿಕಂ | | 2.14% |
| | | ಪಿಸಿಕೆಎಲ್ | | 2.77% |

ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಯ ಶಿಫಾರಸ್ಸಿನನ್ವಯ ವರ್ಷವಾರು ವಂತಿಗೆದರ ಲೆಕ್ಕಾಚಾರ ಮಾಡಲು ಈ ಕೆಳಗಿನ ಕ್ರಮ ಅನುಸರಿಸಬಹುದಾಗಿರುತ್ತದೆ.

1) ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಮೌಲ್ಯಮಾಪಕರ ಶಿಫಾರಸ್ಸಿನ ದರದನ್ವಯ ವರ್ಷವಾರು ವಂತಿಗೆ ಪಾವತಿಸಲು 13.02.2015ಕ್ಕೂ ಹಿಂದೆ ಮತ್ತು 13.02.2015ರ ನಂತರ ನೇಮಕಾತಿ ಹೊಂದಿರುವ ಎನ್‌ಡಿಸಿಪಿಎಸ್ ಸಿಬ್ಬಂದಿಗಳ ವಿವರಗಳನ್ನು ಕ್ರೋಢೀಕರಿಸಿ ವಂತಿಗೆ ಮೊತ್ತವನ್ನು ಲೆಕ್ಕಾಚಾರ ಮಾಡುವುದು.
2) ಈ ರೀತಿ ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಕ್ರೋಢೀಕರಿಸಿದ ವಿವರಗಳು ವರ್ಷವಾರು ವೇತನದ ಮೇಲೆ ಮೌಲ್ಯಮಾಪಕರು ಶಿಫಾರಸ್ಸು ಮಾಡಿರುವ ವಂತಿಗೆ ದರಗಳನ್ನು ಪರಿಗಣಿಸಿ, ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆಯನ್ನು ಲೆಕ್ಕ ಹಾಕುವ ಕ್ರಮ ವಹಿಸಿ, ದಿನಾಂಕ:21.03.2023ರ ಟ್ರಸ್ಟ್ ಪತ್ರದಲ್ಲಿ ತಿಳಿಸಲಾದ **ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಬ್ಯಾಂಕ್ ಉಳಿತಾಯ ಖಾತೆಗಳಿಗೆ** ಕ್ರಮವಾಗಿ ಪಾವತಿ ಮಾಡುವುದು.

ಮೇಲೆ ತಿಳಿಸಿದಂತೆ, ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳನ್ವಯ, ಕವಿಪ್ರನಿನಿ ಮತ್ತು ವಿಸಕಂಗಳು ತಾವು ಪಾವತಿಸಬೇಕಾದ ವಂತಿಗೆ ಮೊತ್ತವನ್ನು ಲೆಕ್ಕಹಾಕಿ ಟ್ರಸ್ಟ್ ಕಛೇರಿಗೆ ವಿವರಗಳೊಂದಿಗೆ, ಬಾಕಿ ವಂತಿಗೆ ಮೊತ್ತವನ್ನು ಒಂದೇ ಕಂತಿನಲ್ಲಿ ಪಾವತಿಗೆ ವ್ಯವಸ್ಥೆ ಮಾಡುವುದು ಹಾಗೂ ಇನ್ನು ಮುಂದೆ ಪ್ರತಿ ಮಾಹೆ ವಂತಿಗೆಯ ತ:ಖ್ತೆಗಳೊಂದಿಗೆ ವಂತಿಗೆಯನ್ನು 7ನೇ ತಾರೀಖಿನೊಳಗೆ ಜಮೆ ಮಾಡುವ ಕ್ರಮ ವಹಿಸುವುದು

ಆದೇಶದ ಮೇರೆಗೆ,

30/3/23

(ಶ್ರೀಮತಿ. ರೂತ್ ಜಾರ್ಜ್ ಮಿರಜ್‌ಕರ್)
ಆರ್ಥಿಕ ಸಲಹೆಗಾರರು (ಪಿಂ & ಉ ಟ್ರಸ್ಟ್) & ವ್ಯವಸ್ಥಾಪಕ ಟ್ರಸ್ಟಿ.
ಕವಿಪ್ರನಿನಿ & ವಿಸಕಂಗಳ ಎನ್‌ಡಿಸಿಪಿಎಸ್ ಕು. ಪಿಂ ಮತ್ತು ಉ ಟ್ರಸ್ಟ್

ನಿರ್ದೇಶಕರು (ಆ ಮತ್ತು ಮಾ.ಸಂ), ಕವಿಪ್ರನಿನಿ ಮತ್ತು ಅಧ್ಯಕ್ಷರು (ಎನ್‌ಡಿಸಿಪಿಎಸ್ ಕು ಪಿಂ & ಉ ಟ್ರಸ್ಟ್) ರವರಿಂದ ಅನುಮೋದಿಸಿದೆ.

**ಪ್ರತಿ ದಯಾಪರ ಅವಗಾಹನೆಗಾಗಿ:**

1. ನಿರ್ದೇಶಕರು (ಸುಧಾರಣೆ) (ಇಂಧನ ಇಲಾಖೆ). ಕರ್ನಾಟಕ ಸರ್ಕಾರ ಬೆಂಗಳೂರು ಹಾಗೂ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಟ್ರಸ್ಟಿ.
2. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ಕಾವೇರಿ ಭವನ ಬೆಂಗಳೂರು ರವರ ಹಿರಿಯ ಆಪ್ತ ಕಾರ್ಯದರ್ಶಿ.
3. ನಿರ್ದೇಶಕರು(ಹಣಕಾಸು), ಕವಿಪ್ರನಿನಿ ಮತ್ತು ಅಧ್ಯಕ್ಷರು, ಪಿಂಚಣಿ ಮತ್ತು ಉಪದಾನ ಟ್ರಸ್ಟ್ ರವರ ಹಿರಿಯ ಆಪ್ತ ಕಾರ್ಯದರ್ಶಿ.
4. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ/ಮವಿಕಂ/ಹುವಿಕಂ/ಗುವಿಕಂ/ಚಾವಿಸನಿರವರ ಹಿರಿಯ ಆಪ್ತ ಕಾರ್ಯದರ್ಶಿ.
5. ನಿರ್ದೇಶಕರು(ಆಡಳಿತ & ಮಾಸಂ), ಕವಿಪ್ರನಿನಿ, ಕಾವೇರಿ ಭವನ ಬೆಂಗಳೂರು ರವರ ಹಿರಿಯ ಆಪ್ತ ಕಾರ್ಯದರ್ಶಿ.

<u>ಪ್ರತಿ ಸೂಕ್ತ ಕ್ರಮಕ್ಕಾಗಿ</u>

1. ನಿರ್ದೇಶಕರು(ವಾಣಿಜ್ಯ) ಪಿಸಿಕೆಎಲ್‌ರವರ ಹಿರಿಯ ಆಪ್ತ ಕಾರ್ಯದರ್ಶಿ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ) ಬೆವಿಕಂ, ಬೆಂಗಳೂರು.
3. ನಿರ್ದೇಶಕರು (ಹಣಕಾಸು) ಹಾಗೂ ಮುಖ್ಯ ಆರ್ಥಿಕ ಅಧಿಕಾರಿ, ಹುವಿಕಂ.
4. ಮುಖ್ಯ ಆರ್ಥಿಕ ಅಧಿಕಾರಿ, ಮವಿಕಂ/ಗುವಿಕಂ/ಚಾವಿಸನಿ.
5. ಆರ್ಥಿಕ ಸಲಹೆಗಾರರು (ಲೆ & ಸಂ)/ಎನ್‌ಡಿಸಿಪಿಎಸ್, ಕವಿಪ್ರನಿನಿ,

<u>ಪ್ರತಿ ಮಾಹಿತಿಗಾಗಿ</u>

1. ಶ್ರೀ ಆರ್.ಹೆಚ್.ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ನೊಂದಣಿ ಸಂಖ್ಯೆ 659) ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ ಕೆ. ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ನೌಕರರ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಇಂಜಿನಿಯರುಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮ ಇಂಜಿನಿಯರುಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
10. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.

<u>ಪ್ರತಿ ಸೂಕ್ತ ಕ್ರಮಕ್ಕಾಗಿ</u>

1. ನಿಯಂತ್ರಣಾಧಿಕಾರಿ(ಹಣಕಾಸು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ವ್ಯವಸ್ಥಾಪಕರು(ನಗದು & ಲೆಕ್ಕಗಳು)/(ಪಿಂಚಣಿ ಕೋಶ)/ (ಆಡಳಿತ)/(ಸಿಬ್ಬಂದಿ-1 &2)/(ಆಂತರಿಕ ನಿರ್ವಹಣೆ), ಕವಿಪ್ರನಿನಿ ಕಾವೇರಿ ಭವನ, ಬೆಂಗಳೂರು.
3. ಲೆಕ್ಕಾಧಿಕಾರಿ(ಪಿಂಚಣಿ/ಪಿಂಚಣಿ ಕೋಶ), ಕವಿಪ್ರನಿನಿ/ಬೆವಿಕಂ/ಮವಿಕಂ/ಹುವಿಕಂ/ಗುವಿಕಂ/ಚಾವಿಸನಿ.

ಮುಖ್ಯಕಡತ.